## ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ಸಂಖ್ಯೆ: ಲೋಕ್/ವಾಹನ/20/ಕೆಎ-01-ಜಿ-5856/2017-18

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ: 25-11-2021

## ಬಹಿರಂಗ ಹರಾಜು ಪ್ರಕಟಣೆ

* * * *

ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಇಲಾಖಾ ವಾಹನ ಸಂಖ್ಯೆ: ಕೆಎ-01-ಜಿ-5856ರ ಮಾರುತಿ ಸ್ವಿಫ್ಟ್ ಡಿಸೈರ್ ವಾಹನವು ಅಪಘಾತಕ್ಕೀಡಾಗಿ ಉಪಯೋಗಿಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ವಾಹನವು ಕುಂಬಳಗೋಡು ಪೊಲೀಸ್ ಠಾಣೆಯ ಆವರಣದಲ್ಲಿದ್ದು, ಸದರಿ ವಾಹನವನ್ನು ಯಾವ ಸ್ಥಿತಿಯಲ್ಲಿ ಇದೆಯೋ, ಅದೇ ಸ್ಥಿತಿಯಲ್ಲಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಈ ಹರಾಜು ಪ್ರಕಟಣೆಯನ್ನು ಹೊರಡಿಸಲಾಗಿದೆ. ಈ ಸಾರ್ವಜನಿಕ ಹರಾಜು ಪ್ರಕ್ರಿಯೆಯನ್ನು ದಿನಾಂಕ: 03/12/2021 ರಂದು ಪೂರ್ವಾಹ್ನ 12-30ಕ್ಕೆ ಕುಂಬಳಗೂಡು ಪೊಲೀಸ್ ಠಾಣೆ ಆವರಣದಲ್ಲಿ ಕೈಗೊಳ್ಳಲಾಗುವುದು.

| | |
|---|---|
| ವಾಹನ ಸಂಖ್ಯೆ | ಕೆಎ-01-ಜಿ-5856 |
| ವಾಹನದ ಮಾದರಿ | ಮಾರುತಿ ಸ್ವಿಫ್ಟ್ ಡಿಸೈರ್ |
| ತಯಾರಿಕೆ ವರ್ಷ | 2013 |

## ಬಹಿರಂಗ ಹರಾಜಿನ ಷರತ್ತು ಮತ್ತು ನಿಬಂಧನೆಗಳು:-

ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವ ಬಿಡ್‌ದಾರರು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.

1. ಪ್ರತಿಯೊಬ್ಬ ಬಿಡ್‌ದಾರರು ರೂ. 2,000/-ಗಳ ಠೇವಣಿ ಹಣವನ್ನು ನಗದು ರೂಪದಲ್ಲಿ ಮಾತ್ರ ಉಪ ನಿಬಂಧಕರು (ಆಡಳಿತ-1), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಪಾವತಿಸತಕ್ಕದ್ದು. ಚೆಕ್ ರೂಪದಲ್ಲಿ ಠೇವಣಿ ಸ್ವೀಕರಿಸುವುದಿಲ್ಲ.
2. ಬಿಡ್‌ದಾರರು ಹರಾಜು ಪ್ರಕ್ರಿಯೆ ಪ್ರಾರಂಭವಾಗುವ ಒಂದು ಗಂಟೆ ಮುಂಚಿತವಾಗಿ ಠೇವಣಿ ಹಣವನ್ನು ಪಾವತಿಸಿ ಸ್ವೀಕೃತಿ ಪಡೆಯತಕ್ಕದ್ದು. ಠೇವಣಿ ಹಣವನ್ನು ಪಾವತಿಸದೇ ಇರುವ ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

Scanned with CamScanner

3. ಬಿಡ್‌ದಾರರು ತಮ್ಮ ವಿಳಾಸ ಮತ್ತು ಭಾವಚಿತ್ರ ಹೊಂದಿರುವ ಸಂಪೂರ್ಣ ವಿಳಾಸವುಳ್ಳ ದಾಖಲಾತಿಗಳನ್ನು ಹಾಜರುಪಡಿಸುವುದು ಮತ್ತು ಸ್ವಯಂ ದೃಢೀಕರಿಸಿದ ನಕಲು (ಜೆರಾಕ್ಸ್ ಪ್ರತಿಯನ್ನು) ಒದಗಿಸಬೇಕು. ಇಲ್ಲದೇ ಇದ್ದ ಪಕ್ಷದಲ್ಲಿ ಹರಾಜಿನಲ್ಲಿ ಭಾಗವಹಿಸಲು ಅವಕಾಶ ನೀಡುವುದಿಲ್ಲ.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಅಥವಾ ನೇಮಿಸಲ್ಪಟ್ಟ ಅಧಿಕಾರಿಗಳು ಬಹಿರಂಗ ಹರಾಜನ್ನು ನಡೆಸುವರು.
5. ಬಹಿರಂಗ ಹರಾಜಿನಲ್ಲಿ ಅತೀ ಹೆಚ್ಚಿನ ಬೆಲೆ (ದರವನ್ನು) ದಾಖಲು ಗೊಳಿಸಿದ ಬಿಡ್‌ದಾರರನ್ನು ಯಶಸ್ವಿ ಸವಾಲುದಾರರೆಂದು ಪರಿಗಣಿಸಲಾಗುವುದು.
6. ಯಶಸ್ವಿಯಾದ ಬಿಡ್‌ದಾರರು/ಸವಾಲುದಾರರು ಹರಾಜಿನ ಒಟ್ಟು ಬೆಲೆಯ ಶೇ. 50 ರಷ್ಟು ಹಣವನ್ನು (ಠೇವಣಿ ಸೇರಿದಂತೆ) ಸ್ಥಳದಲ್ಲಿಯೇ ತುಂಬಬೇಕು. ಉಳಿದ ಹಣವನ್ನು 05 ದಿನದೊಗಳಗಾಗಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಪಾವತಿಸಿ ವಾಹನವನ್ನು ತಮ್ಮ ಸುಪರ್ಧಿಗೆ ಪಡೆಯತಕ್ಕದ್ದು.
7. ಯಶಸ್ವಿ ಬಿಡ್‌ದಾರರು ಮೇಲ್ಕಂಡ ಬಿಡ್ ಹಣದ ಜೊತೆಗೆ ನಿಯಮಾನುಸಾರ ಅರ್ಹ ತೆರಿಗೆಯನ್ನು ಪಾವತಿಸಬೇಕಾಗಿರುತ್ತದೆ.
8. ಯಶಸ್ವಿ ಬಿಡ್‌ದಾರರು 05 ದಿನದೊಳಗಾಗಿ ಅರ್ಹ ತೆರಿಗೆ ಸೇರಿದಂತೆ ಪೂರ್ಣ ಹಣವನ್ನು ಪಾವತಿಸಲು ವಿಫಲವಾದಲ್ಲಿ ಬಿಡ್‌ದಾರರ ಠೇವಣಿ ಹಣ ಮತ್ತು ಮುಂಗಡವಾಗಿ ಪಾವತಿಸಿದ್ದ ಎಲ್ಲಾ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ಮೇಲ್ಕಂಡಂತೆ ಪೂರ್ಣ ಹಣವನ್ನು ಪಾವತಿಸಿದ ನಂತರವೇ ವಾಹನವನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗುವುದು ಮತ್ತು ಈ ವಾಹನವನ್ನು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಾಗಾಣಿಕೆ ಮಾಡಿಕೊಳ್ಳತಕ್ಕದ್ದು.
10. ಯಶಸ್ವಿಯಾಗದ ಬಿಡ್‌ದಾರರ ಠೇವಣಿ ಹಣವನ್ನು ಹರಾಜು ಪ್ರಕ್ರಿಯೆ ಪೂರ್ಣಗೊಂಡ ನಂತರ ಸ್ಥಳದಲ್ಲಿಯೇ ಹಿಂತಿರುಗಿಸಲಾಗುವುದು.
11. ಯಶಸ್ವಿಯಾದ ಬಿಡ್‌ದಾರರು ವಾಹನದ ಮಾಲೀಕತ್ವವನ್ನು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಾರಿಗೆ ಪ್ರಾಧಿಕಾರದಿಂದ ಬದಲಾಯಿಸಿಕೊಳ್ಳತಕ್ಕದ್ದು. ವಾಹನದ ಮಾಲೀಕತ್ವ ಬದಲಾವಣೆ ಮಾಡಿಕೊಡುವಂತೆ ಸಾರಿಗೆ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗುವುದು ಹಾಗೂ ಅಗತ್ಯ ನಮೂನೆಗಳನ್ನು (ಪ್ರಪತ್ರ 29 & 30) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಂದ ಪಡೆಯತಕ್ಕದ್ದು.
12. ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು/ಸವಾಲುದಾರರು ಸರ್ಕಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

Scanned with CamScanner

13. ಹರಾಜು ಪ್ರಕ್ರಿಯೆಯನ್ನು ಅಥವಾ ಸವಾಲನ್ನು ಯಾವುದೇ ಕಾರಣ ನೀಡದೇ ಸ್ಥಗಿತಗೊಳಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಹೊಂದಿರುತ್ತಾರೆ. ಇವರ ನಿರ್ಣಯವೇ ಅಂತಿಮವಾಗಿರುತ್ತದೆ. ಈ ವಿಷಯವಾಗಿ ಯಾವುದೇ ತಕರಾರು ಅಥವಾ ಚರ್ಚೆಗೆ ಅವಕಾಶವಿರುವುದಿಲ್ಲ.
14. ವಾಹನವು ಕುಂಬಳಗೋಡು ಪೊಲೀಸ್ ಠಾಣೆಯ ಆವರಣದಲ್ಲಿದ್ದು, ವಾಹನವನ್ನು (ಹೇಗಿದೆಯೋ ಹಾಗೆ) ಈಗಿರುವ ಸ್ಥಿತಿಯಲ್ಲಿಯೇ ಹರಾಜು ಮಾಡಲಾಗುವುದು.
15. ಹೆಚ್ಚಿನ ಮಾಹಿತಿಯನ್ನು ಕಚೇರಿಯ ವೇಳೆಯಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಕಚೇರಿಯಿಂದ ಪಡೆಯಬಹುದು ಹಾಗೂ ವೆಬ್‌ಸೈಟ್ ವಿಳಾಸ **lokayukta.kar.nic.in** ರಿಂದಲೂ ಮಾಹಿತಿ ಪಡೆಯಬಹುದು.
16. ಯಾವುದೇ ಬಿಡ್‌ದಾರರು ಸುಳ್ಳು ವಿಳಾಸ ನೀಡಿ, ಹೆಚ್ಚಿನ ಮೊತ್ತಕ್ಕೆ ಸವಾಲು ಮಾಡಿ ನಂತರ ಹಣ ಕಟ್ಟದಿದ್ದಲ್ಲಿ ಅಂತಹ ಬಿಡ್‌ದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
17. ಹರಾಜು ದಿನಾಂಕ ಮತ್ತು ಹರಾಜು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳು ಉಂಟಾದಲ್ಲಿ ಈ ಕಚೇರಿಯ ವೆಬ್‌ಸೈಟ್ ವಿಳಾಸ **lokayukta.kar.nic.in** ರಲ್ಲಿ ಮಾತ್ರ ಪ್ರಕಟಿಸಲಾಗುವುದು.

ಮೇಲೆ ತಿಳಿಸಿರುವ ಹರಾಜಿನ ಷರತ್ತು ಮತ್ತು ನಿಬಂಧನೆಗಳ ವಿಷಯದಲ್ಲಿ ಯಾವುದೇ ವಾದ/ವಿವಾದ ಉದ್ಭವಿಸಿದ್ದಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ನೀಡುವ ನಿರ್ಣಯವೇ ಅಂತಿಮವಾಗಿರುತ್ತದೆ.

ನಿಬಂಧಕರು
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

25/11/21 25/11/2021

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.**

1) ಪೊಲೀಸ್ ಅಧೀಕ್ಷಕರು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ಹರಾಜು (ಕೂಗಲು) ಕಾರ್ಯ ನಡೆಸಲು ಓರ್ವ ಪೊಲೀಸ್ ಅಧಿಕಾರಿಯನ್ನು ನಿಯೋಜಿಸಲು ಕೋರಿದೆ.
2) ಪೊಲೀಸ್ ನಿರೀಕ್ಷಕರು, ಕುಂಬಳಗೋಡು ಪೊಲೀಸ್ ಠಾಣೆ ಇವರಿಗೆ ಹರಾಜು ಪ್ರಕ್ರಿಯೆ ಕೈಗೊಳ್ಳಲು ಅವಕಾಶ ಕಲ್ಪಿಸಿಕೊಡುವಂತೆ ಕೋರಿದೆ ಹಾಗೂ ಈ ಸಂಸ್ಥೆಯ ಕಚೇರಿ ಅಧೀಕ್ಷಕರಾದ ಶ್ರೀ ಪ್ರದೀಪ್ ಕುಮಾರ್ ಹೆಚ್.ಜಿ. ಕ.ಅ., ಕಲೋ., ಬೆಂಗಳೂರು ಇವರ ಸ್ವಾಧೀನಕ್ಕೆ ವಾಹನವನ್ನು ಹಸ್ತಾಂತರಿಸಲು ಕೋರಿದೆ.

Scanned with CamScanner

3) ಸಹಾಯಕ ನಿಬಂಧಕರು (ಆಡಳಿತ-2), ಕಲೋ., ಬೆಂಗಳೂರು ಇವರು ನಗದು ಶಾಖೆಯ ಸಿಬ್ಬಂದಿಗಳ ಸಹಾಯದೊಂದಿಗೆ ಸವಾಲುದಾರರು ಸಲ್ಲಿಸುವ ಠೇವಣಿ ಹಣ ಸ್ವೀಕರಿಸಿ ಸೂಕ್ತ ಸ್ವೀಕೃತಿ ನೀಡುವುದು, ಯಶಸ್ವಿ ಬಿಡ್‌ದಾರರಿಂದ ತೆರಿಗೆ ಸೇರಿದಂತೆ ಹಣ ಪಾವತಿಸಿಕೊಂಡು ಸರ್ಕಾರಕ್ಕೆ ಜಮಾ ಮಾಡುವುದು ಮತ್ತು ಯಶಸ್ವಿಯಾಗದ ಬಿಡ್‌ದಾರರಿಗೆ ಠೇವಣಿ ಹಣವನ್ನು ಹಿಂದಿರುಗಿಸಲು ಕ್ರಮ ಕೈಗೊಂಡು ನಿಬಂಧಕರು ರವರಿಗೆ ವರದಿ ಸಲ್ಲಿಸುವುದು.
4) ಉಪ ನಿರ್ದೇಶಕರು (ಸಾಂಖ್ಯಿಕ), ಕಲೋ., ಬೆಂಗಳೂರು ಇವರಿಗೆ ಈ ಹರಾಜು ಪ್ರಕಟಣೆಯನ್ನು ಕಚೇರಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳುವುದು.
5) ವಾಹನ ಶಾಖೆಯ ಸಿಬ್ಬಂದಿಗಳು ಮತ್ತು ಉಪ ನಿಬಂಧಕರು (ಆಡಳಿತ-2), ಕಲೋ., ಬೆಂಗಳೂರು ಇವರು ಮೇಲ್ಕಂಡ ಕಾರ್ಯಗಳ ಬಗ್ಗೆ ಮೇಲ್ವಿಚಾರಣೆ ನಡೆಸುವುದು.
6) ಸೂಚನಾ ಫಲಕಕ್ಕೆ
7) ಕಚೇರಿ ಕಡತಕ್ಕೆ

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಗೌರವಾನ್ವಿತ ಲೋಕಾಯುಕ್ತರವರ ಕಾರ್ಯದರ್ಶಿಗಳು, ಕಲೋ., ಬೆಂಗಳೂರು.
2) ಗೌರವಾನ್ವಿತ ಉಪಲೋಕಾಯುಕ್ತ-1 ಮತ್ತು 2 ರವರ ಆಪ್ತ ಸಹಾಯಕರು, ಕಲೋ., ಬೆಂಗಳೂರು.
3) ಮಾನ್ಯ ನಿಬಂಧಕರವರ ಆಪ್ತ ಸಹಾಯಕರು, ಕಲೋ., ಬೆಂಗಳೂರು.
4) ಉಪ ನಿಬಂಧಕರು ಆಡಳಿತ-1 ಮತ್ತು 2, ಕಲೋ., ಬೆಂಗಳೂರು.
5) ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು ರವರಿಗೆ ಮಾಹಿತಿಗಾಗಿ
6) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಆರ್.ಟಿ.ಓ) ಕೇಂದ್ರ ರವರಿಗೆ

Scanned with CamScanner